ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ-ರವರ ಕಛೇರಿ,
ಕಾ&ಪಾ ಉಪ-ವಿಭಾಗ, ಚಾವಿಸನಿನಿ,
ಬಿಳಿಕೆರೆ. Telephone No: 9448499992

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Office Of: Assistant Executive Engineer Ele
O&M Sub-Division, Bilikere
Web Site: https://cescmysore.karnataka.gov.in
E-mail ID:

Company Identity Number(CIN): U40109KA2004SGC035177

ಕ್ರಮಾಂಕ: ಚಾವಿಸನಿನಿ/ಉ.ವಿ/ಬಿಳಿಕೆರೆ/ಸ.ಕಾ.ನಿ.ಇಂ(ವಿ)/ಸ.ಇಂ(ತಾಂ)/2021-22/ 450 - ದಿನಾಂಕ: 17 - 9 - 21

ದಿನಾಂಕ: 17.09.2021 ರಂದು ಮಧ್ಯಾಹ್ನ 03:00 ಗಂಟೆಗೆ ಶ್ರಿ ಸುನಿಲ್ ಕುಮಾರ್.ಎ.ಎ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪವಿಭಾಗದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಸಭೆಯಲ್ಲಿ ಹಾಜರಿದ್ದವರು:</u>

1. ಶ್ರೀ ಸುನಿಲ್ ಕುಮಾರ್.ಎ.ಎ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಹುಣಸೂರು.
2. ಶ್ರೀಮತಿ ವಿಜಯರತ್ನ.ಸಿ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
3. ಶ್ರೀ ಮಣಿಕಂಠ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
4. ಶ್ರೀಮತಿ ಸುಕ್ರಮ್ಮ, ಹಿರಿಯ ಸಹಾಯಕರು(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
5. ಶ್ರೀ ಜಯಕುಮಾರ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
6. ಶ್ರೀ ಮಹದೇವ.ಜೆ, ಕಿರಿಯ ಇಂಜಿನಿಯರ್(ವಿ) ಪ್ರಭಾರ, ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
7. ಶ್ರೀ ಮಲ್ಲಿಕಾರ್ಜುನ ಎಂ, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.

ಸಭೆಯಲ್ಲಿ ಉಪ-ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿದೇಶದನ್ವಯ ಪ್ರತಿ ಮುರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಜನ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಸೇವೆಯನ್ನು ಉನ್ನತ್ತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 01 | ಮಹೇಶ್, ಚಲ್ಲಹಳ್ಳಿ | ಪರಿವರ್ತಕವು ಅಧಿಕ ಹೊರೆಯಿಂದ ಕೂಡಿದ್ದು, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿದರು. | ಪರಿವರ್ತಕವನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು ಹಾಗೂ ಶಾಖಾಧಿಕಾರಿಗಳಿಗೆ ಹೆಚ್ಚುವರಿ ಪರಿವರ್ತಕ ಅಳವಡಿಕೆ ಬಗ್ಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದರು. |
| 02 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೋಳನಹಳ್ಳಿ ಗ್ರಾಮ ಪಂಚಾಯಿತಿ | ದಿನಾಂಕ: 30.09.2021 ರ ಗುರುವಾರದಂದು ಹೊಸರಾಮೇನಹಳ್ಳಿ ಮತ್ತು ಬೋಳನಹಳ್ಳಿ ಗ್ರಾಮದಲ್ಲಿ ಪಿತೃ ಪಕ್ಷ ಹಬ್ಬವಿರುವುದರಿಂದ ವಿದ್ಯುತ್ ಅಡಚಣೆ ಆಗದಂತೆ ಕ್ರಮವಹಿಸಲು ಕೋರಿದರು. | ಶಾಖಾಧಿಕಾರಿಗಳಿಗೆ ವಿದ್ಯುತ್ ಅಡಚಣೆ ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 03 | ಮಹದೇವಸ್ವಾಮಿ ಬಿನ್ ಜುಂಜೇಗೌಡ, ಬನ್ನಿಕುಪ್ಪೆ | ಸ್ಥಾವರ ಸಂಖ್ಯೆ: BKL-217 ಸ್ಥಾವರದ ಶಾಶ್ವತ ವಿದ್ಯುತ್ ನಿಲುಗಡೆಗೊಳಿಸುವಂತೆ ಕೋರಿದರು. | ಹಿರಿಯ ಸಹಾಯಕರಿಗೆ ದಾಖಲೆಗಳನ್ನು ಪರಿಶೀಲಿಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 04 | ಮಾಚಬಾಯನಹಳ್ಳಿ ಗ್ರಾಮಸ್ಥರು. | ಮಾಚಬಾಯನಹಳ್ಳಿ ಗ್ರಾಮದ 12 ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು. | ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಯಿತು. |
| 05 | ಪುಟ್ಟಸ್ವಾಮಿಗೌಡ ಬಿನ್ ತಿಮ್ಮೇಗೌಡ, ಆಯರಹಳ್ಳಿ | ವಿದ್ಯುತ್ ಕಂಬದಲ್ಲಿ ವೈರ್ ಸಡಿಲವಾಗಿರುವ ಬಗ್ಗೆ. | ಶಾಖಾಧಿಕಾರಿಗಳಿಗೆ ಸಡಿಲವಾಗಿರುವ ತಂತಿಯನ್ನು ಶೀಘ್ರದಲ್ಲಿ ಸರಿಪಡಿಸುವಂತೆ ಸೂಚಿಸಲಾಯಿತು. |

ಸ್ವೀಕರಿಸಿದ ದೂರುಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಶಾಖಾಧಿಕಾರಿಗಳಿಗೆ ಸೂಚಿಸುತ್ತಾ 5:30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ, ಬಿಳಿಕೆರೆ**

ಪ್ರತಿಗಳು:

1. ಮಾನ್ಯ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾಸಂ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸುರು ರವರ ಮಾಹಿತಿಗಾಗಿ.
2. ಮಾನ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸುರು ರವರ ಮಾಹಿತಿಗಾಗಿ.
3. ಮುಖ್ಯ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ ವಲಯ ಕಛೇರಿ ಮೈಸುರು ರವರ ಮಾಹಿತಿಗಾಗಿ.
4. ಅಧೀಕ್ಷಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನ ಮೈಸೂರು ವೃತ್ತ, ಮೈಸುರು ರವರ ಮಾಹಿತಿಗಾಗಿ.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸುರು ರವರ ಮಾಹಿತಿಗಾಗಿ.
6. ಕಛೇರಿ ಪ್ರತಿ.